ಸಾಕ್ಷಿಯನ್ನು ದಿನಾಂಕ 04-07-2022 ರಂದು ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ- 4 ನೇ ಪ್ರತಿವಾದಿ ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ಯಾವ ಯಾವ ಆಸ್ತಿಗಳ ಕುರಿತು ಈ ದಾವೆ ಸಲ್ಲಿಸಲಾಗಿದೆ ಎಂದು ಗೊತ್ತು. ಸರ್ವೇ ನಂಬರುಗಳನ್ನು ಹೇಳಲು ಗೊತ್ತಿಲ್ಲ. ಒಟ್ಟು 3 ಸ್ವತ್ತುಗಳಿಗೆ ಈ ದಾವೆ ಸಲ್ಲಿಸಲಾಗಿದೆ. ಪ್ರತಿವಾದಿ ನಂ. 1 ಮತ್ತು 3 ಮಹಾದೇವಪ್ಪ ಮತ್ತು ಗದಿಗೆಪ್ಪರವರಿಗೆ ಹಿರಿಯರಿಂದ ಬಂದ ಮನೆ ಇದೆ ಎಂದರೆ ನಿಜ. ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ನಮ್ಮ ಕುಟುಂಬದಲ್ಲಿ ಕಾಕ ದೊಡ್ಡಪ್ಪರವರು ಅಪಸಾತ್ ವಾಟ್ನಿಯನ್ನು ಮಾಡಿ ವರದಿ ಕೊಟ್ಟು ವಿಭಾಗ ಮಾಡಿಕೊಂಡಿದ್ದು ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮಹದೇವಪ್ಪ ಮತ್ತು ಗದಿಗೆಪ್ಪರವರು ವಾಟ್ನಿ ಮಾಡಿಕೊಂಡಿಲ್ಲ. ನನಗೆ 4 ಮಂದಿ ಸಹೋದರಿಯರು ಇರುತ್ತಾರೆ. ನನ್ನ ತಂದೆ ತೀರಿಕೊಂಡಿದ್ದು 1992 ರಲ್ಲಿ ಅಗಿರುತ್ತೆ. ನನ್ನ ತಂದೆ ಆಸ್ತಿಗಳನ್ನು ನಾನು ಮತ್ತು ನನ್ನ ಸಹೋದರಿಯರು ಅಪಸಾತ್ ವಾಟ್ನಿ ಮಾಡಿ ಹಂಚಿಕೊಂಡೆವು ಎಂದರೆ ನಿಜ. ಆ ಮೇರೆಗೆ ನನ್ನ ಹೆಸರು ನಮ್ಮ ಸ್ವತ್ತುಗಳ ಕುರಿತು ಸಂಬಂಧಪಟ್ಟ ದಾಖಲೆಗಳಲ್ಲಿ ದಾಖಲಾಯಿತು ಎಂದರೆ ನಿಜ. ವಾದಿಯರಾದ ಗದಿಗೆವ್ವ, ಗಿರಿಜವ್ವ ಮತ್ತು ಗಂಗಮ್ಮ ರವರ ಬಗ್ಗೆ ನನಗೆ ಚೆನ್ನಾಗಿ ಗೊತ್ತು ಎಂದರೆ ಅವರು ನನ್ನ ಅಕ್ಕಂದಿರು ಎಂದು ನುಡಿಯುತ್ತೇನೆ. ಅವರ ಸಹಿಗಳನ್ನು ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ವಾದಿಯರ ಸಹಿಗಳು ಇವೆಯೆ ಎಂದು ಕೇಳಿದರೆ ಅವುಗಳಲ್ಲಿ ವಾದಿ ಸಹಿ ಮಾಡುತ್ತಿರುವುದನ್ನು ನಾನು ನೋಡಿಲ್ಲ ಹಾಗೂ ಆದ್ದರಿಂದ ಅವರ ಸಹಿಗಳ ಬಗ್ಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತೇನೆ. ಸಾಕ್ಷಿಗೆ ದಾವಾ ಪತ್ರದ 1 ನೇ ಪುಟವನ್ನು ತೋರಿಸಿ ಆ ರೀತಿ ಕೇಳಲಾಗಿದೆ ಎಂದು ನ್ಯಾಯಾಲಯ ಗಮನಿಸಿರುತ್ತೆ. ನಾನು ಅವರ ಸಹಿಗಳನ್ನು ಎಲ್ಲೂ ನೋಡಿಲ್ಲವೆ ಎಂದು ಕೇಳಿದರೆ ನಾನೇ ವಾರಸ ಮಾಡಿಕೊಟ್ಟಿದ್ದು ಎಂದು ನುಡಿಯುತ್ತೇನೆ. (ಈ ಸಂದರ್ಬದಲ್ಲಿ ಶ್ರೀ ಎಮ್ ಎಸ್ ಬಿ ವಕೀಲರು ಸಾಕ್ಷಿಯು ನೇರವಾಗಿ ಉತ್ತರ ನೀಡುವಂತೆ ನ್ಯಾಯಾಲಯ ನಿರ್ದೇಶನ ಕೊಡಬೇಕೆಂದು ನುಡಿದಿರುತ್ತಾರೆ. ಸಾಕ್ಷಿಯು ಉದ್ದೇಶಪೂರ್ವಕವಾಗಿ ಹಾರಿಕೆ ಉತ್ತರವನ್ನು

ನೀಡಿದ್ದು ಎಂದು ಮನವರಿಕೆ ಆದರೆ ಮಾತ್ರ ಆ ರೀತಿ ನಿರ್ದೇಶನ ನೀಡಬಹುದೇ ಹೊರತು ಪ್ರತಿ ಪ್ರಶ್ನೆಗೂ ಏಕಾಏಕಿ ನಿರ್ದೇಶನವನ್ನು ಆ ರೀತಿ ನೀಡುವುದು ಸೂಕ್ತವಲ್ಲ ಎಂದು ನ್ಯಾಯಾಲಯದ ಅಬಿಪ್ರಾಯವಾಗಿರುತ್ತೆ ಆದ್ದರಿಂದ ಮುಂದಿನ ಪ್ರಶ್ನೆಯನ್ನು ಕೇಳಲು ಅನುವು ಮಾಡಿಕೊಟ್ಟು ಕೋರಿಕೆಯನ್ನು ತೀರಸ್ಕರಿಸಲಾಯಿತು. ) ನನ್ನ ದೊಡ್ಡಪ್ಪನ ಕಾಲದಿಂದ ಯಾವ ರೀತಿ ಖಾತೆ ಬದಲಾವಣೆ ಆಗಿದಾದವೆಂದು ನಾನು ದಾಖಲೆಗಳನ್ನು ಪರಿಶೀಲಿಸಿ ನೋಡಿದ್ದೇನೆಯೇ ಎಂದು ಕೇಳಿದರೆ ನಾನೇ ಖಾತೆ ಬದಲಾವಣೆಯನ್ನು ನನ್ನ ಅಪ್ಪರವರ ಕಾಲದ 3 ಹಿಸ್ಸೆಗಳನ್ನು ಮಾಡಿಸಿದ್ದೆ ಹಾಗೂ ದೊಡ್ಡಪ್ಪರೊಂದಿಗೆ ಅವರವರ ಒಂದೊಂದು ಹಿಸ್ಸೆ ಕುರಿತು ಖಾತೆ ಮಾಡಿಸಿಕೊಟ್ಟಿದ್ದೆ ಹಾಗೂ ನನ್ನ ತಂದೆ ಹಿಸ್ಸೆ ಬಗ್ಗೆ ಖಾತೆ ಮಾಡಿಸಿಕೊಟ್ಟಿದ್ದೆ ಎಂದು ನುಡಿಯುತ್ತೇನೆ. ರುದ್ರಪ್ಪ ತೀರಿಕೊಂಡ ನಂತರ ಮಹದೇವಪ್ಪ ಮತ್ತು ಗದಿಗೆಪ್ಪರವರು ಯಾವ ರೀತೀ ಖಾತೆ ಮಾಡಿಸಿಕೊಂಡರು ನಾನು ನೋಡಿಲ್ಲವೆ ಎಂದು ಕೇಳಿದರೆ ಹೆಣ್ಣು ಮಕ್ಕಳ ಹೆಸರು ಬಿಟ್ಟು ಅವರು ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತೇನೆ. ಆ ರೀತಿ ಯಾವ ಮ್ಯೂಟೇಶನ್ ಎಂಟ್ರಿ ನೋಡಿದ್ದೇನೆ ಎಂದು ಕೇಳಿದರೆ ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲಾಗಿದೆ ಎಂದು ನುಡಿಯುತ್ತೇನೆ. ನನ್ನ ಸಾಕ್ಷಿ ಮೂಲಕ ಯಾವ ದಾಖಲೆ ಹಾಜರುಪಡಿಸಿದ್ದೇನೆ ಎಂದು ಕೇಳಿದರೆ ನಾನೇನು ನನ್ನ ದಾಖಲೆ ಕೊಟ್ಟಿಲ್ಲ ಹೆಣ್ಣು ಮಕ್ಕಳ ವಾರಸಾ ದಾಖಲೆಗಳನ್ನು ಅವರಿಗೆ ತೆಗೆಸಿಕೊಟ್ಟಿದ್ದೆ ಎಂದು ನುಡಿಯುತ್ತೇನೆ. ಅದನ್ನು ಕೋರ್ಟಿಗೆ ನಾನು ಕೊಟ್ಟಿದ್ದೇನೆಯೆ ಎಂದು ಕೇಳಿದರೆ ನಾನು ವಕೀಲರಿಗೆ ಕೊಟ್ಟಿದ್ದೇನೆ ಎಂದು ನುಡಿಯುತ್ತೇನೆ. ನನ್ನ ಮೂಲಕ ಹಾಜರುಪಡಿಸಿಲ್ಲ ಎಂದರೆ ನನ್ನ ಅಕ್ಕಂದಿರ ಮೂಲಕ ಕೊಟ್ಟಿದ್ದೇನೆ ಎಂದು ನುಡಿಯುತ್ತೇನೆ. ಅದು ಯಾವ ದಾಖಲೆ ಎಂದು ಕೇಳಿದರೆ ವಾರಸಾ ದಾಖಲೆ ಎಂದು ನುಡಿಯುತ್ತೇನೆ. ರುದ್ರಪ್ಪನ ಹಿಸ್ಸೆಗೆ ಎಷ್ಟು ಸರ್ವೇ ನಂಬರುಗಳು ಬಂದಿದ್ದವು ಎಂದು ಕೇಳಿದರೆ 201, ಸರ್ವೇ ನಂಬರನಲ್ಲಿ ಇದೆ ಹಾಗೂ ಬೇರೆ ಕೂಡ ಇದೆ ಹಾಗೂ ದಾಖಲೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತೇನೆ. ರುದ್ರಪ್ಪನ ಹೆಸರಿನಲ್ಲಿ ಇಂತಹ ಸರ್ವೇ ನಂಬರ ಬಂತು ಎಂದು ನನಗೆ ಗೊತ್ತಿಲ್ಲ ಎಂದರೆ ನನಗೆ ಸ್ವತ್ತುಗಳು ಗೊತ್ತು ಆ ಸ್ವತ್ತುಗಳು ನನ್ನ ಹಿಸ್ಸೆಗೆ ಬಂದ ಸ್ವತ್ತುಗಳಲ್ಲ ಹಾಗೂ ಸರ್ವೇ ನಂಬರು ಹೇಳಲು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತೇನೆ. ನನ್ನ ಅಕ್ಕತಂಗಿಯರು ನನ್ನ ಹಿಸ್ಸೆಗೆ ಬಂದ ಸ್ವತ್ತುಗಳ ಬಗ್ಗೆ ತಕರಾರು

ಮಾಡಿಲ್ಲ ಎಂದರೆ ನಾನು ಅವರಿಗೆ ಅಪಸಾತ್ ವಾಟ್ನಿಯಲ್ಲಿ ಸ್ವತ್ತು ಕೊಟ್ಟಿದ್ದೇನೆ ಎಂದು ನುಡಿಯುತ್ತೇನೆ. ಅವರಿಗೆ ಯಾವ ಸ್ವತ್ತು ಕೊಟ್ಟಿದ್ದೇನೆ ಎಂದು ಕೇಳಿದರೆ ಅವರ ಜೊತೆ ಕೂಡಿ ಮಾರಾಟ ಮಾಡಿದ್ದೇನೆ ಎಂದು ನುಡಿಯುತ್ತೇನೆ. ನಾನು ಮಾರಾಟ ಮಾಡಿದ ಖರೀದಿ ಪತ್ರಗಳಿಗೆ ನನ್ನ ಅಕ್ಕತಂಗಿಯರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. 2008-09 ನೇ ಸಾಲಿನಲ್ಲಿ ನಾನು ಮಾರಾಟ ಮಾಡಿದ್ದೆ ಸಾಕ್ಷಿ ಸ್ವತಃ ನುಡಿಯುತ್ತಾರೆ ಸ್ವಲ್ಪ ಸ್ವಲ್ಪ ಮಾರಾಟ ಮಾಡುತ್ತಾ ಬಂದಿದ್ದೇವೆ. ನಾನು ರುದ್ರಪ್ಪನ ಕುಟುಂಬದ ಸದಸ್ಯನಲ್ಲ ಎಂದರೆ ದೊಡ್ಡಪ್ಪನ ಕುಟುಂಬಕ್ಕೆ ಸೇರಿದೆ ಎಂದು ನುಡಿಯುತ್ತೇನೆ. ನಮ್ಮ ಕುಟುಂಬ ಹಾಗೂ ದೊಡ್ಡಪ್ಪ ರುದ್ರಪ್ಪನ ಕುಟುಂಬ 50 ವರ್ಷದ ಹಿಂದೆ ವಿಭಾಗ ಮಾಡಿಕೊಂಡಿದೆ ಎಂದರೆ ನಿಜ. ನನ್ನ ತಂದೆಯ ಕುಟುಂಬ ಹಾಗೂ ದೊಡ್ಡಪ್ಪರ ಕುಟುಂಬ 50 ವರ್ಷದಿಂದ 3 ಬೇರೆ ಬೇರೆ ಕುಟುಂಬಗಳಾಗಿದೆ ಎಂದರೆ ನಿಜ. ದಾವಾ ಆಸ್ತಿಗಳ ಚಕಬಂದಿ ಹೇಳಲು ಸಾಧ್ಯವಿಲ್ಲ. ಅದು ಯಾರ ಮಾಲ್ಕಿ ಕಬ್ಜಾದಲ್ಲಿದೆ ಎಂದು ಕೇಳಿದರೆ ಒಬ್ಬ ಗದಿಗೆಪ್ಪ ಮಾರಾಟ ಮಾಡಿದ್ದಾನೆ ಇನ್ನೊಬ್ಬ ಮಹದೇವಪ್ಪ ಹಾಗೆ ಇಟ್ಟುಕೊಂಡಿದ್ದಾನೆ ಹಾಗೂ ಇವರು ದಾವೆಯನ್ನು ಸಲ್ಲಿಸಿದ್ದಾರೆ ಹಾಗೂ ಮಹದೇವಪ್ಪ ಮಾರಾಟ ಮಾಡಲು ಪ್ರಯತ್ನ ಪಟ್ಟಾಗ ತಕರಾರು ಮಾಡಿದ್ದಾರೆ ಎಂದು ನುಡಿಯುತ್ತೇನೆ. ಮಹದೇವಪ್ಪರವರು ಸರ್ವೇ ನಂ. 202/1 ರಲ್ಲಿ 5 ನೇ ಪ್ರತಿವಾದಿ ತುಷಾರಗೆ 2019 ರಲ್ಲಿ ಸ್ವತ್ತು ಮಾರಾಟ ಮಾಡಿದ್ದಾನೆ ಎಂದರೆ ಅದನ್ನು ಯಾವ ದಿನಾಂಕದಲ್ಲಿ ಮಾರಾಟ ಮಾಡಿದ್ದು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತೇನೆ. ಅದೇ ರೀತಿ 2010 ರಲ್ಲಿ 4 ನೇ ಪ್ರತಿವಾದಿ ಗೆ ಸರ್ವೇ ನಂ.186/4 ಅ ಅಂದರೆ ದಾವಾ ಐಟಂ ನಂ.3 ರಲ್ಲಿನ ಸ್ವತ್ತನ್ನು ಮಾರಾಟ ಮಾಡಿದ್ದಾನೆ ಎಂದರೆ ಆತ ಯಾವತ್ತು ಮಾರಾಟ ಮಾಡಿದ್ದು ಎಂದು ಗೊತ್ತಿಲ್ಲ ಎಂದು ನುಡಿಯುತ್ತೇನೆ. ನನ್ನ ಪ್ರಮಾಣ ಪತ್ರ ಸಲ್ಲಿಸುವಾಗ ಪ್ರತಿವಾದಿ 1 ಮತ್ತು 3 ರವರು ಮಾರಾಟ ಮಾಡಿದ್ದಾರೆಂದು ಮಾಹಿತಿಯನ್ನು ಕೊಟ್ಟಿದ್ದೇನೆ ಎಂದು ಕೇಳಿದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತೇನೆ. ನನ್ನ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಸಂಪೂರ್ಣ ಮಾಹಿತಿ ಇಲ್ಲವೆ ಎಂದು ಕೇಳಿದರೆ ಗೊತ್ತು ಎಂದು ನುಡಿಯುತ್ತೇನೆ. ನಾನು 7 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ಮಹದೇವಪ್ಪ 5 ನೇ ಪ್ರತಿವಾದಿ ಗೆ ಹೊಲ ಮಾರಾಟ ಮಾಡಿದ್ದಾನೆಂದು ಆ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ನಿಜ. ಈಗ ಆ ಹೊಲ ನೇತ್ರಾಣಿ ರವರ

ಕಬ್ಜೆಯಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮಹದೇವಪ್ಪರ ರವರು ನೇತ್ರಾಣಿ ರವರಿಗೆ ಲಾವಣಿಪಿ ಹಾಕಿದ್ದಾರೆ. ಆ ರೀತೀ ಕಾಗದ ಪತ್ರ ನಾನು ನೋಡಿಲ್ಲ. ಊರಲ್ಲಿ 10 ಮಂದಿ ಮಾತನಾಡುತ್ತಿರುವುದು ಕೇಳಿ ಆ ರೀತಿ ನಮ್ಮ ಅಣ್ಣ ಮಹದೇವಪ್ಪ ಕೂಡ ಹೇಳುತ್ತಿದ್ದರು. ನನ್ನ ಹೊಲವನ್ನು ಮಹದೇವಸ ನೇತ್ರಾಣಿ ರವರಿಗೆ ನಾನು ಮಾರಾಟ ಮಾಡಿದ್ದೇನೆ ಅವರು 4 ನೇ ಪ್ರತಿವಾದಿ ವಿನಾಯಕರವರ ತಂದೆ ಎಂದರೆ ನಿಜ. ನಾನು ಮಾರಾಟ ಮಾಡಿದ ಸದರಿ ಹೊಲ ಹಾಗೂ ಮಹದೇವಪ್ಪ ಗದಿಗೇಪ್ಪರವರ ಹೊಲ ಒತ್ತಟ್ಟಿಗೆ ಇತ್ತು ಎಂದರೆ ನಿಜ. ಅದು ಸರ್ವೇ ನಂ.186/4 ಅ ರಲ್ಲಿದ್ದ ಹೊಲ ಒಟ್ಟು ಮೂರು ಕೂರಗಿ ಹೊಲ ಆಗಿತ್ತು ಅದು 3 ಕೂರಗಿ ಹೊಲ ಈಗ ನೇತ್ರಾಣಿ ರವರ ಸ್ವಾಧೀನದಲ್ಲಿದೆ ಎಂದರೆ ನಿಜ. ಮಹದೇವಪ್ಪ ಮತ್ತು ಗದಿಗೆಪ್ಪ ಹೆಸರಿನಲ್ಲಿ ಬೇರೆ ಆಸ್ತಿಗಳು ಇವೆ ಎಂದು ಕೇಳಿದರೆ ಬೇರೆ ಹೊಲ ಇಲ್ಲ ಎಂದು ನುಡಿಯುತ್ತೇನೆ. ಅವರಿಬ್ಬರ ಹೆಸರಿನಲ್ಲಿ ಮನೆಗಳು ಇವೆ ಎಂದರೆ ನಿಜ. ಆ ರೀತಿ 2 ಮನೆಗಳು ಇವೆ. ವಾಟ್ನಿಯಲ್ಲಿ ದೊಡ್ಡಪ್ಪ ರುದ್ರಪ್ಪನಿಗೆ ಚರ ಆಸ್ತಿಗಳು ಬಂದಿದ್ದು ಎಂದರೆ ಹಿರಿಯರಿಗೆ ಬಂದಿದ್ದನ್ನು ಅವರಿಗೆ ತೇಗೆದುಕೊಂಡಿದ್ದಾರೆ ಹಾಗೂ ನಂತರ ನಾನು ನೋಡಿಲ್ಲ ಎಂದು ನುಡಿಯುತ್ತೇನೆ. ಆ ರೀತೀ ಬಂದ ಚರ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಅವುಗಳ ಬಗ್ಗೆ ನಾನು ನೋಡಿಲ್ಲ ಹಾಗೂ ಅವುಗಳ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತೇನೆ. ಈ ದಾವೆಯನ್ನು ಹೊಲದ ಬಗ್ಗೆ ಮಾತ್ರ ಸಲ್ಲಿಸಿದ್ದು ಎಂದರೆ ಹೊಲ ಮತ್ತು ಮನೆ ಕೂಡಿಸಿ ಹಾಕಿದ್ದಾರೆ ಎಂದರೆ ನಿಜ. ನನಗೆ ಈಗ ಯಾವುದೇ ಹೊಲ ಇಲ್ಲ. ನನ್ನ ಉದ್ಯೋಗ ಏನು ಎಂದು ಮುಖ್ಯವಿಚಾರಣೆಯ ಪ್ರಮಾಣಪತ್ರ ದಲ್ಲಿ ಬರೆಸಿದ್ದೇನೆ ಎಂದು ಕೇಳಿದರೆ ವ್ಯವಸಾಯ ಎಂದು ಬರೆಸಿದ್ದೇನೆ ಎಂದು ನುಡಿಯುತ್ತೇನೆ. ಆ ರೀತೀ ವ್ಯವಸಾಯ ಮಾಡಲು ನನಗೆ ಸ್ವಂತ ಜಮೀನು ಇಲ್ಲ ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ಅಣ್ಣ ತಮ್ಮಂದಿರ ಹೊಲಗಳಲ್ಲಿ ಹಾಗೂ ಬೇರೆ ಹೊಲಗಳಲ್ಲಿ ವ್ಯವಸಾಯ ಮಾಡುತ್ತೇನೆ**.** ನನ್ನ ಸ್ವಂತ ಒಕ್ಕಲುತನ ಮಾಡಲು ಜಮೀನು ಇಲ್ಲ ಎಂದರೆ ನಿಜ. ನಾನು ಬೇರೆಯವರ ಜಮೀನಿನಲ್ಲಿ ಕೂಲಿ ಕಲಸಕೆ್ಕ ಹೋಗುತ್ತೇನೆ ಎಂದರೆ ನಿಜ. ವಾದಿಯರು ಹಾಗೂ ಪ್ರತಿವಾದಿ **1** ರಿಂದ **3** ರ ನಡುವೆ ಅವರ ತಂದೆಯ ಕಾಲದಲ್ಲಿ ವಾಟ್ನಿ ಆಗಿತ್ತು ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಇದ್ದಾಗಲೇ ವಾಟ್ನಿ ಮಾಡಿಕೊಂಡು ಉತಾರಗಳನ್ನು ಮಾಡಿಕೊಂಡಿದ್ದಾರೆಂದರೆ ಆ ಮೇಲೆ ಅದನ್ನು ಮಾಡಿಕೊಂಡಿದ್ದಾರೆ ಹಾಗು ಅದರಲ್ಲಿ ಹೆಣ್ಣು ಮಕ್ಕಳ

ಹೆಸರು ಬಂದಿಲ್ಲ ಎಂದು ನುಡಿಯುತ್ತೇನೆ. ನನ ದೊಡ್ಡಪ್ಪ ಇದ್ದಾಗಲೇ ಉತಾರ ಮಾಡಿಕೊಂಡಿದ್ದು ಎಂದರೆ ಸರಿಯಲ್ಲ. ಎಷ್ಟನೇ ಇಸವಿಯಲ್ಲಿ ಉತಾರ ಮಾಡಿಕೊಂಡಿದ್ದೆ ಎಂದು ಹೇಳಲು ನೆನಪಿಲ್ಲ. ನನಗೆ ಗದಿಗೆಪ್ಪ ಹಾಗೂ ಮಹದೇವಪ್ಪನಿಗೆ ಅಷ್ಟಕ್ಕಷ್ಟೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾವು ಚೆನ್ನಾಗಿಯೆ ಇದ್ದೇವೆ. ನನಗೆ ಇಬ್ಬರು ಮಗಂದಿರು ಹಾಗೂ ಒಬ್ಬಳು ಮಗಳು. ವಾದಿಯರ ಅಥವಾ **2** ನೇ ಪ್ರತಿವಾದಿಯ ಮಗಳಂದಿರನ್ನು ನನ್ನ ಮಗನಿಗೆ ಮದುವೆ ಮಾಡಿಸಿಲ್ಲ. ವಾದಿಯರು ನನ್ನೊಂದಿಗೆ ಚೆನ್ನಾಗಿದ್ದಾರೆ ಎಂದರೆ ನಿಜ. ನಾನು ಸಾಕ್ಷಿ ಹೇಳಲು ಬಂದಿರುವುದು ವಾದಿಯರ ವಿನಂತಿ ಮೇರೆಗೆ ಎಂದರೆ ಅವರು ಕರೆದಾಗ ಬಂದು ಹೇಳಲೆಬೇಕಾಗುತ್ತೆ ಹಾಗೂ ಅವರಿಗೆ ಹಿಸ್ಸೆ ಇರುವಾಗ ಬಂದು ಹೇಳದೇ ಇದ್ದಲ್ಲಿ ಜಗಳಗಳು ಆಗುತ್ತೆ ಹಾಗೂ ಆದ್ದರಿಂದ ಕರೆದಾಗ ಸಾಕ್ಷಿ ಹೇಳಲು ಬರಬೇಕಾಗುತ್ತೆ ಎಂದು ನುಡಿಯುತ್ತೇನೆ. ನನ್ನ ಅಕ್ಕತಂಗಿಯರನ್ನು ಆಗರ್ಭ ಶ್ರೀಮಂತರ ಮನೆಗೆ ಕೊಟ್ಟಿರುವುದೇ ಎಂದು ಕೇಳಿದರೆ ಬಡವರ ಮನೆಗೆ ಕೊಟ್ಟಿರುವುದು ಎಂದು ನುಡಿಯುತ್ತೇನೆ. ನಮ್ಮ ಮನೆತನಕ್ಕೆ ತಕ್ಕಂತೆ ಕೊಡಬೇಕಾಗಿರುವದೆಲ್ಲ ಕೊಟ್ಟು ನನ್ನ ಅಕ್ಕತಂಗಿಯರ ಮದುವೆ ಮಾಡಿಕೊಟ್ಟಿದ್ದು ಎಂದು ಕೇಳಿದರೆ ಅವರಿಗೆ ಹಿಸ್ಸೆಯನ್ನು ಕೂಡ ಕೊಟ್ಟಿದ್ದೆ ಎಂದು ನುಡಿಯುತ್ತೇನೆ. ವಾದಿಯರ ಮದುವೆಗೆ ನಾನು ಹಿರಿತನ ಮಾಡಲು ಹೋಗಿದ್ದೆನೇ ಎಂದು ಕೇಳಿದರೆ ಅವಾಗ ನಾನು ಚಿಕ್ಕವಯಸ್ಸಿನವನಾಗಿದ್ದೆ ಎಂದು ನುಡಿಯುತ್ತೇನೆ. ವಾದಿಯರ ಮದುವೆ ನನ್ನ ದೊಡ್ಡಪ್ಪ ಜೀವಂತ ಇದ್ದಾಗಲೇ ಆಗಿತ್ತು. ನನ್ನ ದೊಡ್ಡಪ್ಪ ವಾದಿಯರನ್ನು ಅವರ ಮನೆತನಕ್ಕೆ ತಕ್ಕಂತೆ ಖರ್ಚು ಮಾಡಿ ಮದುವೆ ಮಾಡಿಕೊಟ್ಟಿದ್ದು ಎಂದರೆ ಅವಾಗ ಏನು ಮಾಡಿರುವುದು ಗೊತ್ತಿಲ್ಲ ಎಂದು ನುಡಿಯುತ್ತೇನೆ. ವಾದಿಯರನ್ನು ಎಂತವರ ಮನೆತನಕ್ಕೆ ಮದುವೆ ಮಾಡಿಕೊಟ್ಟರು ಎಂದು ನನಗೆ ಗೊತ್ತಿಲ್ಲ. **2010** ರಲ್ಲಿ ಭೂಮಿಯ ಬೆಲೇ ಕಡಿಮೆ ಇತ್ತು ಎಂದರೆ ನಿಜ. ಈಗ ದಿನದಿಂದ ದಿನಕ್ಕೆ ಬೆಲೆ ಏರುತ್ತಿದೆ ಎಂದರೆ ಇರಬಹುದು. ಮಹದೇವಪ್ಪ ಮತ್ತು ಗದಿಗೆಪ್ಪ ರವರಿಗೆ ಬಂದ ಪಾಲನ್ನು **4** ಮತ್ತು **5** ನೇ ಪ್ರತಿವಾದಿ ಯರಿಗೆ ಮಾರಾಟ ಮಾಡಿದ್ದಾರೆ ಎಂದು ವಾದಿಯರಿಗೆ ಮೊದಲಿನಿಂದಲೂ ಗೊತ್ತಿತ್ತು ಎಂದರೆ ಸರಿಯಲ್ಲ. ಈಗ ಬೆಲೆ ಜಾಸ್ತಿಯಾಗಿರುವುದರಿಂದ **4** ನೇ ಪ್ರತಿವಾದಿ ಯ ಕೇಸು ದಾಖಲಿಸಿ ಹೆಚ್ಚಿನ ರೊಕ್ಕ ಪಡೆದುಕೊಳ್ಳಲು ದಾವೆ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿ **1** ಮತ್ತು **3** ರವರು ನೇತ್ರಾ ರವರಿಗೆ ಸ್ವತ್ತು ಮಾರಾಟ ಮಾಡುವ ವ್ಯವಹಾರದಲ್ಲಿ ನಾನು ಇರಲಿಲ್ಲ ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು

ನನ್ನ ಹೊಲ ಮಾತ್ರ ಮಾರಾಟ ಮಾಡಿದ್ದು ಎಂದು ನುಡಿಯುತ್ತೇನೆ. ಆಸ್ತಿ ಖರೀದಿ ಮಾಡುವವರು ಉತಾರನಲ್ಲಿ ಯಾರ ಹೆಸರಿನಲ್ಲಿದೆ ಎಂದು ನೋಡಿ ನಂಬಿ ಖರೀದಿ ಮಾಡುತ್ತಾರೆ ಎಂದರೆ ನಿಜ. ವಾದಿಯರ ಕೋರಿಕೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಗದಿಗೆಪ್ಪ ಮತ್ತು ಮಹದೇವಪ್ಪ ಬಂದು ಹಾಜರಾಗಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಡಿ ಎಮ್ ಎನ್ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.